	ಬ್ಯಾಂಕ್, ಬೆಂಗಳೂರು	1	-	-	1
16)	ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳ (ನಿ) ಬೆಂಗಳೂರು	3	4	22	29
	ಒಟ್ಟು	583	551	578	1,712

ಆ)1)ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಕಲಂ 70ರಡಿಯಲ್ಲಿ ಮಾಡಿರುವ ವಿವಾದಗಳು ನ್ಯಾಯಕ ಸ್ವರೂಪವಾಗಿದ್ದು, ಇವುಗಳನ್ನು ತೀರ್ಮಾನಿಸುವಲ್ಲಿ ಕಾನೂನಿನ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

2) ವಿವಾದ ಮಾಡುವಲ್ಲಿ ಕೆಲವು ಸಂಸ್ಥೆಗಳು ಅವಧಿ ಮೀರಿ ಹೂಡುತ್ತಿದ್ದು, ವಿಳಂಬ ವಿನಾಯಿತಿ ಅರ್ಜಿಗಳನ್ನು ಇತ್ಯರ್ಥ ಮಾಡಿದ ನಂತರ ವಿವಾದಗಳ ವಿಚಾರಣೆಯನ್ನು ಮುಂದುವರಿಸಬೇಕಾಗುತ್ತದೆ.

3) ವಿವಾದ ಅರ್ಜಿ ಜೊತೆಯಲ್ಲಿ ಮೂಲ ದಾಖಲಾತಿಗಳನ್ನಾಗಲೀ ಅಥವಾ ದೃಢೀಕರಿಸಿದ ದಾಖಲೆಗಳನ್ನಾಗಲಿ ಸಲ್ಲಿಸದೇ ಇರುವುದು.

4) ವಾದಿಗಳು ಮತ್ತು ಪ್ರತಿವಾದಿಗಳು ಗೈರು ಹಾಜರಿ ಆಗುವುದು.

5) ವಿಚಾರಣೆಯು ನಡೆಯುವಾಗ ಉಭಯ ಪಕ್ಷಗಾರರು ಸಲ್ಲಿಸುವ ಮಧ್ಯಂತರ ಅರ್ಜಿಗಳನ್ನು ಇತ್ಯರ್ಥ ಮಾಡುವುದು.

6) ವಿವಾದದ ಪ್ರಕರಣಗಳು ನ್ಯಾಯಾಂಗದ ಸ್ವರೂಪವಾಗಿದ್ದು ವಿವಾದ ಇತ್ಯರ್ಥವು ವಿವಾದದಲ್ಲಿ ನವಿಷಯಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದ ವಿವಾದಗಳನ್ನು ಇತ್ಯರ್ಥಪಡಿಸಲು ಅವಧಿಯನ್ನು ನಿಗಧಿಪಡಿಸುವುದು ಸಾಧುವಲ್ಲ, ಆದರೂ ಶೀಘ್ರ ಇತ್ಯರ್ಥಕ್ಕಾಗಿ ಸಂಬಂಧಪಟ್ಟವರನ್ನು ವಿನಂತಿಸಲಾಗಿದೆ.

ಇ) ಹೌದು.

ಮೈಸೂರು ಬಸ್ ಸ್ಟ್ಯಾಂಡಿನ ಕ್ಯಾಂಟೀನ್ ಕುರಿತು

458 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬಸ್ ಸ್ಟ್ಯಾಂಡಿನ ಕೆ.ಎಸ್.ಆರ್.ಟಿ.ಸಿ. ಕ್ಯಾಂಟೀನ್‌ಗೆ ಟೆಂಡರ್ ಕರೆಯಲಾಗಿದೆಯೇ?

ಆ) ಇದರಲ್ಲಿ ಇಲಾಖಾ ಅಧಿಕಾರಿಗಳು ಶಾಮಿಲಾಗಿದ್ದಾರೆಯೇ ಎಂಬ ಬಗ್ಗೆ ಯಾರು ಸರ್ಕಾರಕ್ಕೆವರಿಗೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈ ಗೊಂಡಿರುವ ಕ್ರಮವೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ